ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿದವರ ಸಂಖ್ಯೆ

299 (587) ಶ್ರೀ ಸಾಬತ್ ಆಲಿ ಖಾನ್ (ಚನ್ನಪಟ್ಟಣ):- ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ?

ಅ) ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದ ಪುರುಷರು ಹಾಗೂ ಮಹಿಳಾ ನಿರುದ್ಯೋಗಿಗಳ ಒಟ್ಟು ಸಂಖ್ಯೆ (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಕಳೆದ ಮೂರು ವರ್ಷಗಳಿಂದ ಉದ್ಯೋಗಾವಕಾಶ ಕಲ್ಪಿಸಿದ ಅಭ್ಯರ್ಥಿಗಳ ಸಂಖ್ಯೆ?

ಇ) ಸದರಿ ಉದ್ಯೋಗ ವಿನಿಮಯ ಕೇಂದ್ರಗಳಿಂದ ಸರ್ಕಾರದವರು ನೇಮಕಾತಿಗಾಗಿ ಹೆಸರಿನ ಷಿಫ್ಟಿಯನ್ನು ತರಿಸದೆ ಕೇವಲ ನೇಮಕಾತಿ ಸಮಿತಿ ಮತ್ತು ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡುತ್ತಿರುವುದರಿಂದ ಈ ಉದ್ಯೋಗ ವಿನಿಮಯ ಕೇಂದ್ರಗಳನ್ನು ರದ್ದುಗೊಳಿಸುವುದು ಸೂಕ್ತವಲ್ಲವೆ?

ಈ) ಹಾಗಿಲ್ಲದಿದ್ದಲ್ಲಿ ಇದಕ್ಕೆ ನೀಡುವ ಕಾರಣಗಳೇನು ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು):-

ಅ) ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ 1991ನೇ ಡಿಸೆಂಬರ್ ಅಂತ್ಯಕ್ಕೆ 2,82,266 ಮಹಿಳೆಯರು ಸೇರಿದಂತೆ ಒಟ್ಟು 14,23,280 ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಉದ್ಯೋಗಾಕಾಂಕ್ಷಿಗಳಾಗಿದ್ದರು. ಇವರುಗಳ ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಕೊಡಲಾಗಿದೆ.

ಆ) ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಕಳೆದ ಮೂರು ವರ್ಷಗಳಿಂದ ಅಂದರೆ 1-1-1989 ರಿಂದ 31-12-1991 ರವರೆಗೆ ಒಟ್ಟು 30,905 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿಕೊಡಲಾಗಿದೆ.

ಇ) ರಾಜ್ಯ ಸರ್ಕಾರದಲ್ಲಿನ ಎಲ್ಲಾ ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ'ಹುದ್ದೆಗಳಿಗೆ ರಾಜ್ಯದ ಲೋಕಸೇವಾ ಆಯೋಗ ಮತ್ತು ಇತರೆ ನೇಮಕಾತಿ ಸಮಿತಿಗಳ ಮೂಲಕ ನೇಮಕಾತಿ ಮಾಡಲಾಗುತ್ತಿದೆ. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿನ ಎಲ್ಲಾ ಇಲಾಖೆಗಳಲ್ಲಿನ ಗ್ರೂಪ್ 'ಡಿ' ಹುದ್ದೆಗಳು ಹಾಗೂ ಕೇಂದ್ರ : ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿಯ ಗರಿಷ್ಠ ವೇತನ ಶ್ರೇಣಿ ಮಾಪೆಯಾನ ರೂ. 1,250ಕ್ಕೆ ಒಳಪಡುವ ಹುದ್ದೆಗಳು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಭರ್ತಿ ಮಾಡಲಾಗುತ್ತಿದೆ. ಇತ್ತೀಚೆಗೆ ಶಿಕ್ಷಣ ಇಲಾಖೆ, ಪ್ರೈಮರಿ ಹಾಗೂ ಸೆಕೆಂಡರಿ ಶಾಲಾ ಶಿಕ್ಷಕರ ನೇಮಕಾತಿಯನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಭರ್ತಿ ಮಾಡುವ ಕ್ರಮ ಕೈಗೊಂಡಿದ್ದಾರೆ.

ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನೆರವು ನೀಡುವುದಲ್ಲದೆ ವೃತ್ತಿ ಮಾರ್ಗದರ್ಶನ ಹಾಗೂ ಉದ್ಯೋಗ ಮಾರುಕಟ್ಟೆ ಮಾಹಿತಿ ಸಂಗ್ರಹಣೆ ವಿಶ್ಲೇಷಣೆ ಮತ್ತು ಪ್ರಕಟಣೆ, ಸ್ವಂತ ಉದ್ಯೋಗದ ಬಗ್ಗೆ ಮಾಹಿತಿ : ನೆರವು ಅಂಗವಿಕಲರಿಗೆ ವಿಶೇಷ ನೆರವು ಇತರೆ ಕಾರ್ಯಗಳನ್ನು ಸಹ ಉದ್ಯೋಗ ವಿನಿಮಯ ಕೇಂದ್ರಗಳು ನೆರವೇರಿಸಿಕೊಂಡು ಬರುತ್ತಿದೆ. ಆದ ಕಾರಣ, ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳನ್ನು ರದ್ದುಗೊಳಿಸುವುದು ಉಚಿತವಲ್ಲ.

ಈ) ಮೇಲೆ ಹೇಳಿರುವ ಕಾರಣಗಳೇ ಸ್ವಯಂವೇದ್ಯವಾಗಿರುತ್ತದೆ. ಆಲ್ಲದೆ ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಶಾಸನ 1959ನ್ನು ಜಾರಿಗೊಳಿಸುವ ಹೊಣೆಯನ್ನು ಸಹ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳು ನಿರ್ವಹಿಸುತ್ತವೆ.

ANNEXURE

Statement showing district wise break-up of applicants in the rolls of the Employment Exchanges in the State at the end of December 1991.

Sl.No	Districts	Men	Women	Total
1.	Bangalore	349827	97374	447201
2.	Belgaum	79253	12037	91290
3.	Bellary	41127	6363	47495
4.	Bidar	31765	4007	35772
5.	Bijapur	54223	7445	61668
6.	Chickmagalur	22572	7752	30324
7.	Chitradurga	43994	12185	56179
8.	Coorg	8559	4911	13470
9.	Dharwad	82789	16429	99218
10.	Gulbarga	41654	6519	48173
11.	Hassan	30693	5420	36113
12.	Kolar	40729	8379	49108
13.	Mandya	28810	8591	37401
14.	Mysore	65421	15835	81256
15.	North Canara	32108	12235	44343
16.	Raichur	34972	4975	39947
17.	Shimoga	45505	12798	58303
18.	South Canara	48815	25195	74010
19.	Tumkur	58198	13811	72009
	Grand Total	1141014	282266	1423280

ರಾಜ್ಯದಲ್ಲಿನ ಖಾಸಗಿ ಸಿಮೆಂಟ್ ಫ್ಯಾಕ್ಟರಿಗಳ ಸಂಖ್ಯೆ

300 (586) ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):- ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ಖಾಸಗಿ ಸಿಮೆಂಟ್ ಫ್ಯಾಕ್ಟರಿಗಳ ಸಂಖ್ಯೆ ಎಷ್ಟು?

ಆ) ಇವುಗಳಿಗೆ ಯಾವ ಮೂಲದಿಂದ ಕಚ್ಚಾ ಪದಾರ್ಥಗಳು ಪೂರೈಕೆಯಾಗುತ್ತಲಿವೆ ಮತ್ತು ಒಂದು ದಿನಕ್ಕೆ ಎಷ್ಟು ಪೂರೈಕೆಯಾಗುತ್ತಿದೆ?

ಇ) ಈ ಮೂಲಗಳಿಂದ ರಾಜ್ಯ ಬೊಕ್ಕಸಕ್ಕೆ ಎಷ್ಟು ರಾಜಧನ ಸಂದಾಯವಾಗಿದೆ? (1988-89 ರಿಂದ ಇಲ್ಲಿಯವರೆಗಿನ ವಿವರಣೆ ಕೊಡುವುದು)

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):-

ಅ) ರಾಜ್ಯದಲ್ಲಿ ಆರು ಮೇಜರ್ ಸಿಮೆಂಟ್ ಫ್ಯಾಕ್ಟರಿಗಳು ಮತ್ತು ಇಪ್ಪತ್ನಾಲ್ಕು ಮಿನಿ ಸಿಮೆಂಟ್ ಫ್ಯಾಕ್ಟರಿಗಳು ಖಾಸಗಿಯವರಿಗೆ ಸೇರಿದ್ದಾಗಿದೆ.

ಆ) ಇವುಗಳಿಗೆ ಅವುಗಳ ಸಾಮರ್ಥ್ಯಕ್ಕನುಗುಣವಾಗಿ ವಿವಿಧ ಮಾಲೀಕರು ಹೊಂದಿರುವ ಗಣಿ ಗುತ್ತಿಗೆಗಳಿಂದ ಕಚ್ಚಾ ಪದಾರ್ಥಗಳು ಪೂರೈಕೆಯಾಗುತ್ತವೆ. ಈ ಕಾರ್ಖಾನೆಗಳಿಗೆ ಒಂದು ದಿನಕ್ಕೆ ಬೇಕಾದ ಸರಾಸರಿ ಕಚ್ಚಾ ಪದಾರ್ಥಗಳು 20190 ಟನ್‌ಗಳು.